# ಆಹಾರ ನಮ್ಮ ಹಕ್ಕು – ಕರ್ನಾಟಕ

ದಿನಾಂಕ: 30-03-2023

ರವರಿಗೆ,

**ಗೌರವಾನ್ವಿತ ಮುಖ್ಯಮಂತ್ರಿಗಳು,**

ಕರ್ನಾಟಕ ಸರ್ಕಾರ,

ಬೆಂಗಳೂರು,

**ವಿಷಯ: ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಶಾಲೆಗಳು ಹಾಗೂ ಅಂಗನವಾಡಿಗಳಿಗೆ ಕೂಡಲೇ ಹಾಲು ಸರಬರಾಜನ್ನು ಮರುಸ್ಥಾಪಿಸಲು ನಿಮ್ಮ ತುರ್ತು ಮಧ್ಯಸ್ಥಿಕೆಯನ್ನು ಕೋರಿ ಮನವಿ.**

ಮಾನ್ಯರೇ,

ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳು ಮತ್ತು ಅಂಗನವಾಡಿಗಳಿಗೆ ಪೂರೈಕೆಯಾಗುತ್ತಿದ್ದ ಹಾಲು (ಪೌಡರ್) ಸರಬರಾಜಿನಲ್ಲಿ ಜನವರಿ 2023 ರಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಉಂಟಾಗಿರುವ ತೊಡಕಿನ ಕುರಿತು ನಿಮ್ಮ ತುರ್ತು ಗಮನವನ್ನು ಸೆಳೆಯಲು ಇಚ್ಛಿಸುತ್ತೇವೆ. ಪತ್ರಿಕಾ ವರದಿಗಳ ಪ್ರಕಾರ, ಕೆಎಂಎಫ್‌ನಿಂದ ಪೂರೈಕೆಯಾಗುತ್ತಿದ್ದ ಹಾಲಿನ ಪೌಡರ್ ಪೈಕಿ 11 ಜಿಲ್ಲೆಗಳಿಗೆ ಸರಬರಾಜನ್ನು ಜನವರಿಯಿಂದ ನಿಲ್ಲಿಸಲಾಗಿದೆ. ಇವುಗಳಲ್ಲಿ ಗದಗ, ಬೀದರ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಲ್ಲಿ ಹಸಿವು ಮತ್ತು ಅಪೌಷ್ಟಿಕತೆಯ ಪ್ರಮಾಣ ಹೆಚ್ಚಿದೆ.[1]

ಹಾಲು ಕ್ಯಾಲ್ಸಿಯಂನ ಉತ್ತಮ ಮೂಲಗಳಲ್ಲಿ ಒಂದಾಗಿದ್ದು, ಗಟ್ಟಿಮುಟ್ಟಾದ ಮೂಳೆಗಳು ಮತ್ತು ಹಲ್ಲುಗಳನ್ನು ರೂಪಿಸಲು ನೆರವಾಗುತ್ತದೆ ಹಾಗೂ ಇದರ ಜೊತೆಗೆ, ಹಾಲು ಉತ್ತಮ ಗುಣಮಟ್ಟದ ಪ್ರೊಟೀನುಗಳು ಮತ್ತು ಪ್ರಗತಿಕಾರಕಗಳನ್ನು ಹೊಂದಿದ್ದು, ಮಕ್ಕಳಲ್ಲಿ ಎತ್ತರವನ್ನು ವೃದ್ಧಿಸಿ, ಬೆಳವಣಿಗೆ ಕುಂಠಿತ (ವಯಸ್ಸಿಗಿಂತ ಕಡಿಮೆ ಎತ್ತರ) ವನ್ನು ತಡೆಗಟ್ಟುತ್ತದೆ. ಹೈದರಾಬಾದಿನ ರಾಷ್ಟ್ರೀಯ ಪೌಷ್ಟಿಕಾಂಶ ಸಂಸ್ಥೆಯು ಇತ್ತೀಚಿನ ತನ್ನ ವರದಿಯಲ್ಲಿ ಹಾಲು ಉತ್ತಮ ಜೀರ್ಣಪ್ರಕ್ರಿಯೆಯ ಅಂಶಗಳನ್ನು ಮಾತ್ರವಲ್ಲದೆ ಉತ್ತಮ ಗುಣಮಟ್ಟದ ಪ್ರೊಟೀನುಗಳನ್ನು ಸಹ ಹೊಂದಿದೆ ಎಂದು ಹೇಳಿದೆ.

ಹಾಲು ನೀರಿನಲ್ಲಿ ಕರಗುವ ಪೌಷ್ಟಿಕಾಂಶಗಳಾದ ಬಿ1, ಬಿ2, ಬಿ3, ಬಿ5, ಬಿ6, ಬಿ12, ಫೋಲೇಟ್, ಕೊಬ್ಬಿನಲ್ಲಿ ಕರಗುವ ಪೋಷಕಾಂಶಗಳು, ಜಿಂಕ್, ಮ್ಯಾಗ್ನೀಸಿಯಮ್, ಫೋಸ್ಫೋರಸ್ ಇತ್ಯಾದಿ ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿದೆ. 150 ಮಿ.ಲಿ. ಹಾಲನ್ನು ಮಾಡಲು ಮರು ರೂಪಿಸಲ್ಪಡುವ 18 ಗ್ರಾಂನಷ್ಟು ಹಾಲಿನ

---

1 Deccan Herald, "No milk in schools since Jan, attendance dips in K'taka, March 26, 2023.

ಪೌಡರ್‌ನಲ್ಲಿ 4.68 ಗ್ರಾಂ ಪ್ರೊಟೀನ್ ಇರುತ್ತದೆ. ಹಾಲಿನ ಪೌಡರನ್ನು ಸೇವಿಸುತ್ತಿರುವ ಮಕ್ಕಳು ತಮ್ಮ ತೂಕ ಮತ್ತು ಎತ್ತರದಲ್ಲಿ ಗಣನೀಯ ಏರಿಕೆಯನ್ನು ಕಂಡಿದ್ದಾರೆ ಎಂದು ಅಧ್ಯಯನಗಳು ಸಾಬೀತುಪಡಿಸಿವೆ.

ಕ್ಷೀರಭಾಗ್ಯ ಯೋಜನೆಯ ಪ್ರಾಮುಖ್ಯತೆ ಅದರಡಿಯಲ್ಲಿ ನೀಡುವ ಒಂದು ಲೋಟ ಹಾಲಿನ ಪೌಷ್ಟಿಕಾಂಶ ಮೌಲ್ಯದಲ್ಲಿಲ್ಲ. ಬದಲಿಗೆ ಮಕ್ಕಳು ಬಹುತೇಕವಾಗಿ ಹಸಿವಿನಿಂದಲೇ ಶಾಲೆಗೆ ಬರುತ್ತಾರೆ. ಕಳೆದ ದಿನದ ಊಟ ಹಾಗೂ ಪ್ರಸಕ್ತ ದಿನದ ಮಧ್ಯಾಹ್ನದ ಬಿಸಿಯೂಟ (ಮಧ್ಯಾಹ್ನ 12 ಗಂಟೆಗೆ) ಸಿಗುವವರೆಗೂ ಈ ನಡುವೆ 15-16 ಗಂಟೆಗಳ ಕಾಲ ಅವರು ಹಸಿವಿನಿಂದಿರುವ ಸಂದರ್ಭದಲ್ಲಿ ಈ ಒಂದು ಲೋಟ ಹಾಲು ಮಾತ್ರವೇ ಅವರಿಗೆ ಸಿಗುವ ಆಹಾರವಾಗಿದೆ. ಬಹುಕೋಟಿ ಪ್ರಾಜೆಕ್ಟುಗಳಾದ ಮೆಟ್ರೋ ರೈಲು ಹಾಗೂ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಅನ್ನು ಉದ್ಘಾಟಿಸುವ ರಾಜ್ಯ ಸರ್ಕಾರಕ್ಕೆ ಮೂರು ತಿಂಗಳಿನಿಂದಲೂ ಈ ಜಿಲ್ಲೆಗಳ ಶಾಲೆಗಳಿಗೆ ಕಡಿತವಾಗಿರುವ ಹಾಲಿನ ಪೌಡರ್ ಸರಬರಾಜನ್ನು ಮರುಸ್ಥಾಪಿಸಲು ಇನ್ನೂ ಸಾಧ್ಯವಾಗಿಲ್ಲ ಎಂಬುದು ಅತ್ಯಂತ ಬೇಸರದ ಹಾಗೂ ಖೇದಕರ ಸಂಗತಿಯಾಗಿದೆ.

ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳು ಮತ್ತು ಅಂಗನವಾಡಿಗಳಿಗೆ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಪೂರೈಕೆಯಾಗುತ್ತಿದ್ದ ಹಾಲಿನ ಪೌಡರ್ ಸರಬರಾಜು ಕಡಿತಗೊಂಡಿರುವುದು ಕೆಎಂಎಫ್, ರೈತರಿಂದ ಪಡೆದುಕೊಳ್ಳುತ್ತಿದ್ದ ಉತ್ಪನ್ನಗಳ ಪ್ರಮಾಣದಲ್ಲಿ ಇಳಿಕೆಯಾದ್ದರಿಂದ ಎಂದು ಹಲವು ವರದಿಗಳು ಹೇಳಿವೆ. ಈ ಇಳಿಕೆಗೆ ಕಾರಣಗಳು ಈ ಕೆಳಗಿನಂತಿವೆ.

- ಹಾಲಿನ ಚಿಲ್ಲರೆ ದರದ ಮೇಲೆ ಅವಶ್ಯಕ ಏರಿಕೆಗೆ ಅನುಮತಿ ನೀಡದ ಸರ್ಕಾರದ ಕ್ರಮ
- ನವೆಂಬರ್ 2022 ರಿಂದ ಹಾಲು ಮಾರಾಟಗಾರರಿಗೆ ಒಂದು ಲೀಟರ್ ಮೇಲೆ 5 ರೂ. ಪ್ರೋತ್ಸಾಹ ಧನ ಸರ್ಕಾರದಿಂದ ಪಾವತಿಯಾಗದಿರುವುದು.[2]

ಆದುದರಿಂದ, ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳು ಮತ್ತು ಅಂಗನವಾಡಿಗಳಿಗೆ ಹಾಲು ಸರಬರಾಜು ಮಾಡುವುದನ್ನು ಮುಂದುವರೆಸಲು ಈ ಕೆಳಗಿನ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ವಿನಂತಿಸಿಕೊಳ್ಳುತ್ತಿದ್ದೇವೆ:

1. ನವೆಂಬರ್ 2022 ರಿಂದ ನಿಲ್ಲಿಸಲಾಗಿರುವ ಒಂದು ಲೀಟರ್ ಹಾಲಿಗೆ ನೀಡುತ್ತಿದ್ದ 5 ರೂಪಾಯಿಗಳ ಪ್ರೋತ್ಸಾಹ ಧನ ಬಾಕಿ ಪಾವತಿಯನ್ನು ಕೂಡಲೇ ಬಿಡುಗಡೆಗೊಳಿಸಬೇಕು.
2. ಕೆಎಂಎಫ್ ಸಾಕಷ್ಟು ಪ್ರಮಾಣದಲ್ಲಿ ಅಗತ್ಯವಾದ ಹಾಲನ್ನು ಪಡೆದುಕೊಳ್ಳುತ್ತಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಹಾಲಿನ ಅವಶ್ಯಕ ಚಿಲ್ಲರೆ ದರವನ್ನು ಹೆಚ್ಚಿಸುವುದು.
3. ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಸಬಲೀಕರಣ ಇಲಾಖೆಯಲ್ಲಿ ಬಾಕಿ ಉಳಿದಿರುವ ಕೆಎಂಎಫ್‌ನ ಎಲ್ಲಾ ಬಾಕಿ ಮೊತ್ತವನ್ನು ಕೂಡಲೇ ತೀರಿಸುವುದು.
4. ಸದ್ಯ ಉಳಿದಿರುವ ಹಾಲಿನ ಪೌಡರ್ ಪ್ರಮಾಣವನ್ನು ಇತರರ ಯಾವುದೇ ಕಾರ್ಯಕ್ಕೆ ವಿನಿಯೋಗಿಸದೆ ಕ್ಷೀರಭಾಗ್ಯ ಯೋಜನೆಯಡಿಯಲ್ಲಿನ ಉದ್ದೇಶಗಳಿಗೆ ಮಾತ್ರ ಸರಬರಾಜು ಮಾಡಬೇಕೆಂದು ಕೆಎಂಎಫ್‌ಗೆ ನಿರ್ದೇಶನವನ್ನು ನೀಡಬೇಕು.
5. ಭವಿಷ್ಯದಲ್ಲಿ, ಕೆಎಂಎಫ್ ತುರ್ತು ಸಂಗ್ರಹವಾಗಿ ಸಾಕಷ್ಟು ಪ್ರಮಾಣದ ಹಾಲಿನ ಪೌಡರ್ ಅನ್ನು ಇಂತಹ ಅಭಾವಗಳನ್ನು ನೀಗಿಸುವ ಸಲುವಾಗಿ ಸಂಗ್ರಹಿಸಿಡಬೇಕು. ಇಂತಹ ಸಂಗ್ರಹವನ್ನು

---

2 *The Hindu*, “Incentive for milk producers pending since November 2022,” March 16, 2023.

ನಿಭಾಯಿಸುವುದಕ್ಕೆ ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಮುಂಗಡ ಹಣವನ್ನು ಕೆಎಂಎಫ್‌ಗೆ ಪಾವತಿಸಬೇಕು.

ಯಾವುದೇ ಕಾರಣಕ್ಕೂ ಮದರಸಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳು ನಡೆಸುತ್ತಿರುವ ಇತರೆ ಅನುದಾನಿತ ಶಾಲೆಗಳೂ ಸೇರಿದಂತೆ, ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳು, ಹಾಗೂ ಅಂಗನವಾಡಿಗಳಿಗೆ ಪೂರೈಕೆಯಾಗುತ್ತಿರುವ ಕ್ಷೀರಭಾಗ್ಯ ಯೋಜನೆಯಲ್ಲಿ ತೊಡಕು ಉಂಟಾಗಬಾರದು.

ತಮ್ಮ ವಿಶ್ವಾಸಿಗಳು,

ಆಹಾರ ನಮ್ಮ ಹಕ್ಕು - ಕರ್ನಾಟಕ

ವಿಳಾಸ: 293, 6th Main, 3rd Cross, Viveknagar, Bengaluru-560047